


ಸಣ್ಣ ಶಾಖವಾದರೂ ಹೊಮ್ಮಲಿ ಎಂದು ಕಾದಳು. ಹಾಂ! ಅಲ್ಲೊಂದು ಸಣ್ಣ ಬಿಸಿಯಿದೆ ಅನಿಸಿತು. ತಕ್ಷಣ ಅಂವ ಹೊದ್ದಿದ್ದ ಕಂಬಳಿಯ ಜೊತೆ ತನ್ನ ಕೈಯನ್ನೂ ಸೇರಿಸಿ ಹೊದೆಸಿದಳು. ಹಿಡಿದ ಕೈಯನ್ನು ಅವನ ಭುಜದ ನೇರಕ್ಕೇ ಇಳಿಸಿಕೊಂಡು ತಾನೂ ಸೀಟಿನ ನೇರಕ್ಕೆ ಒರಗಿಕೊಂಡಳು.

ಮತ್ತೆ ಮತ್ತೆ ಹಸ್ತವನ್ನು ಉಜ್ಜುತ್ತಾ ಪ್ರಾರ್ಥಿಸಿದಳು, ಧ್ಯಾನಿಸಿದಳು; ಎರಡೂ ಕೈಗಳಿಂದ. ದೇವರೇ ನನ್ನ ಬದುಕನ್ನು ಕಾಪಾಡು...

ಅವನ ಒರಟು ಕೈ ತನ್ನದೊಂದು ಸ್ಪರ್ಶಕ್ಕೆ ಯಾವತ್ತೂ ಇಷ್ಟೊಂದು ತಣ್ಣನೆಗೆ ಪ್ರತಿಸ್ಪರ್ಶಿಸಿದ ಉದಾಹರಣೆ ಈ ಒಂಬತ್ತು ವರ್ಷಗಳ ಬದುಕಿನಲ್ಲಿ ಇಲ್ಲವೇ ಇಲ್ಲ. ಅದು ಯಾವತ್ತೂ ಬೆರಗಾಗುತ್ತಿತ್ತು. ಕದಲುತ್ತಿತ್ತು. ಬೆಚ್ಚಗಾಗುತ್ತಿತ್ತು. ಆ ಸ್ಪರ್ಶದ ಸಂವೇದನೆ ಆತನ